

# ಶಾಲೆಗಳಲ್ಲಿ ಹೊಸಬೆಳಕು

ಕೊರೊನಾ ನಿಯಂತ್ರಣಕ್ಕಾಗಿ ಜಾರಿಗೊಳಿಸಲಾಗಿದ್ದ ಲಾಕ್‌ಡೌನ್ ತೆರವುಗೊಂಡು ವಿದ್ಯಾರ್ಥಿಗಳು ಶಾಲೆಗಳಿಗೆ ಮರಳಿ ಹೋಗುವಂತಾದುದು 2021ರ ಪ್ರಮುಖ ವಿದ್ಯಮಾನ ಮಾತ್ರವಲ್ಲ, ನಾಗರಿಕ ಸಮಾಜಕ್ಕೆ ನೆಮ್ಮದಿ ತಂದ ಘಟನೆಯೂ ಹೌದು.

ಕೊರೊನಾ ಕಾರಣದಿಂದಾಗಿ ಸುಮಾರು ಒಂದೂವರೆ ವರ್ಷ ಕಾಲ ಮನೆಯ ಚೌಕಟ್ಟಿನಲ್ಲಿಯೇ ಉಳಿಯಬೇಕಾದ ಮಕ್ಕಳು, ಶಾಲೆಗಳಿಗೆ ಹೋಗುವುದರಿಂದ ವಂಚಿತರಾಗಿ ಆನ್‌ಲೈನ್ ಶಿಕ್ಷಣದ ಪ್ರಯೋಗಕ್ಕೆ ತಮ್ಮನ್ನೊಡ್ಡಿಕೊಳ್ಳಬೇಕಾಯಿತು. ಅನೇಕ ಮಿತಿಗಳ ಆನ್‌ಲೈನ್ ಶಿಕ್ಷಣ ಗ್ರಾಮೀಣ ಭಾಗದ ಬಹುತೇಕ ವಿದ್ಯಾರ್ಥಿಗಳಿಗೆ ಮರೀಚಿಕೆ ಎನ್ನುವಂತಾಯಿತು. ಬಹುತೇಕ ಮಕ್ಕಳು ಕಲಿಕೆಯ ಉತ್ಸಾಹ ಕಳೆದುಕೊಳ್ಳುವ ಹಂತಕ್ಕೆ ತಲುಪಿದ್ದರು. ಶಾಲೆಗಳು ಮುಚ್ಚಿದ್ದರಿಂದಾಗಿ ವಿದ್ಯಾರ್ಥಿಗಳು ಕಲಿಕೆಯಿಂದ ವಂಚಿತರಾದುದಷ್ಟೇ ಅಲ್ಲ; ಮಕ್ಕಳು ಮನೆಯಲ್ಲಿಯೇ ಉಳಿಯುವಂತಾದುದರಿಂದ ಬಾಲ್ಯ ವಿವಾಹಗಳು ಹೆಚ್ಚಾಗತೊಡಗಿದವು, ಬಾಲ ಕಾರ್ಮಿಕರ ಸಂಖ್ಯೆಯೂ ಹೆಚ್ಚಾಯಿತು. ಈ ಅಡ್ಡ ಪರಿಣಾಮಗಳನ್ನು ತಡೆಗಟ್ಟುವ ನಿಟ್ಟಿನಿಂದಲೂ ಶಾಲೆಗಳನ್ನು ಆದಷ್ಟು ಬೇಗ ತೆರೆಯಬೇಕಾದ ಸವಾಲು ಸರ್ಕಾರದ ಮುಂದಿತ್ತು.

ಶಾಲೆಗಳಲ್ಲೀಗ ಮಕ್ಕಳ ಕಲರವ ಮತ್ತೆ ಆರಂಭವಾಗಿದೆ. ಇದೇ ಸಮಯದಲ್ಲಿ ಕೊರೊನಾದ ಮೂರನೇ ಅಲೆಯ ಸಾಧ್ಯತೆಯ ಆತಂಕವೂ ಆರಂಭವಾಗಿದೆ. 'ಓಮೈಕ್ರಾನ್' ಹೆಸರಿನ ಕೊರೊನಾ ರೂಪಾಂತರ ತಳಿ ಬೂದಿ ಮುಚ್ಚಿದ ಕೆಂಡದಂತೆ ಹೆದರಿಕೆ ಹುಟ್ಟಿಸುತ್ತಿದೆ.

# ಸ್ವಾತಂತ್ರ್ಯದ ಅಮೃತಪಥ

7



ದೇಶದ ಎಪ್ಪತ್ತೈದನೇ ಸ್ವಾತಂತ್ರ್ಯೋತ್ಸವಕ್ಕೆ ಮುನ್ನುಡಿ ಬರೆದುದು 2021ರ ಮಹತ್ವದ ಘಟನೆಗಳಲ್ಲೊಂದು. ಭಾರತೀಯರಲ್ಲಿ ಸಹಜವಾಗಿಯೇ ಹೆಮ್ಮೆ, ಅಭಿಮಾನ ಹಾಗೂ ಪುಳಕಕ್ಕೆ ಕಾರಣವಾದ ಸ್ವಾತಂತ್ರ್ಯ ದಿನಾಚರಣೆಯ 'ಅಮೃತ ಮಹೋತ್ಸವ' ಸಂಭ್ರಮ 2023ರ ಆಗಸ್ಟ್ 15ರವರೆಗೂ ಮುಂದುವರೆಯಲಿದ್ದು, ಆ ಸಾಲು ಸಂಭ್ರಮಕ್ಕೆ 2021ರ ಆಗಸ್ಟ್ 15 ಮುನ್ನುಡಿ ಬರೆಯಿತು. ಈ ವಿಶೇಷ ಸಂದರ್ಭವನ್ನು ಅವಿಸ್ಮರಣೀಯಗೊಳಿಸಲು ಕೇಂದ್ರ ಸರ್ಕಾರ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ನವದೆಹಲಿಯ ಕೆಂಪುಕೋಟೆಯಲ್ಲಿ ನಡೆದ 75ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ದೇಶವನ್ನುದ್ದೇಶಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಕಾರ್ಯರೂಪಕ್ಕೆ ತರುವ ವಿಷಯಕ್ಕೆ ಒತ್ತು ನೀಡುವ ವಿಷಯ ಪ್ರಸ್ತಾಪಿಸಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೂಡ ಗ್ರಾಮೀಣ ಅಭಿವೃದ್ಧಿಗೆ ಆದ್ಯತೆ ನೀಡುವ ಮಾತುಗಳನ್ನಾಡಿದ್ದಾರೆ. 'ಅಮೃತ ಗ್ರಾಮ ಪಂಚಾಯಿತಿ' ಯೋಜನೆಯಡಿ ಗ್ರಾಮ ಪಂಚಾಯಿತಿಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಉದ್ದೇಶ ಅವರದು.

'ದೇಶದ ಎಲ್ಲ ಯೋಜನೆಗಳು ಶೇ 100ರಷ್ಟು ಜನರಿಗೆ ಸಂಪೂರ್ಣವಾಗಿ ತಲುಪಬೇಕು' ಎಂದು ಹೇಳಿರುವ ಪ್ರಧಾನಿ, 'ದೇಶವು ಅಭಿವೃದ್ಧಿ ಪಥದಲ್ಲಿ ಸಾಗುವಾಗ ಯಾರೂ ಹಿಂದುಳಿಯಬಾರದು. ಸೌಲಭ್ಯಗಳಿಂದ ವಂಚಿತರಾದವರಿಗೆ ವಿಶೇಷ ಆದ್ಯತೆ ನೀಡಬೇಕು. ದುರ್ಬಲ ವರ್ಗದವರನ್ನು ಅಭಿವೃದ್ಧಿ ಪಥದಲ್ಲಿ ಕೈಹಿಡಿದು ನಡೆಸುವ ಅಗತ್ಯವಿದೆ' ಎಂದು ಹೇಳಿದ್ದಾರೆ. 'ಸಬ್‌ಕಾ ಸಾತ್ ಸಬ್‌ಕಾ ವಿಕಾಸ್' ಎನ್ನುವ ತಮ್ಮ ಜನಪ್ರಿಯ ಘೋಷಣೆಯನ್ನವರು 'ಸಬ್‌ಕಾ ವಿಶ್ವಾಸ್ ಸಬ್‌ಕಾ ಪ್ರಯಾಸ್' ಎಂದು ವಿಸ್ತರಿಸಿದ್ದಾರೆ. 'ಎಲ್ಲರ ಜೊತೆ ಎಲ್ಲರ ಏಳ್ಗೆಗೆ ಎಲ್ಲರ ಪ್ರಯತ್ನ' ಎನ್ನುವ ಆಶಯ 'ಬಹುತ್ವ ಭಾರತದ ಪರಿಕಲ್ಪನೆಗೆ ಪೂರಕವಾದುದು. ಸಾಮರಸ್ಯದ ಸಹಿಷ್ಣು ಭಾರತವನ್ನು ಕೇವಲ ಹೇಳಿಕೆಗಳಿಗೆ ಸೀಮಿತಗೊಳಿಸದೆ ನಿಜವಾದ ಅರ್ಥದಲ್ಲಿ ಬಹುತ್ವ ಭಾರತವನ್ನು ರೂಪಿಸುವ ಸವಾಲು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ನಮ್ಮ ಮುಂದಿರುವುದನ್ನು ಪ್ರಧಾನಿ ಸೂಚ್ಯವಾಗಿ ಹೇಳಿರುವಂತಿದೆ.